ಸಿ. ಸಿ. ನಂ.- **526/2022**

ಪಿ.ಡಬ್ಲ್ಯೂ. **1**

ಸಾಕ್ಷಿಯು ದಿನಾಂಕ- **27-06-2025** ರಂದು ವಿಚಾರಣೆಗಾಗಿ ಹಾಜರಾಗಿದ್ದು ಅವರಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀಸವಾಲು- ಆರೋಪಿ ಪರ ಶ್ರೀ ಸಿ ಎಂ ಕೆ ವಕೀಲರಿಂದ -

ನಾನು ವ್ಯವಸಾಯ ಮಾಡುತ್ತೇನೆ. ನಾನು ಎಂ.ಯು.ಮೋಹನ್ ರವರ ವಿರುದ್ಧ ಈ ಪಿರ್ಯಾದಿ ಸಲ್ಲಿಸಿರುತ್ತೇನೆ. ಅವರು ಬೆಂಗಳೂರಿನ ಬಿ.ಎಸ್.ಎಫ್ ನಲ್ಲಿ ಕೆಲಸ ಮಾಡುತ್ತಾರೆ. ಅವರು ಎಲ್ಲಿ ವಾಸಮಾಡುತ್ತಾರೆ ಎಂದರೆ ಸಾಕ್ಷಿ ಅವರು ಮೈಸೂರು ಮೂಲದವರು ಎಂದು ಗೊತ್ತು ಎಂದು ನುಡಿಯುತ್ತಾರೆ. ಸುಬ್ರಮಣ್ಯ ರವರ ಮುಖಾಂತರ ನನಗೆ ಆರೋಪಿಯ ಪರಿಚಯವಾಯಿತು. ಸದರಿ ಸುಬ್ರಮಣ್ಯರವರು ಸಹ ಬಿ.ಎಸ್.ಎಫ್ ನಲ್ಲಿ ಕೆಲಸ ಮಾಡುತ್ತಾರೆ. ಸುಬ್ರಮಣ್ಯ ರವರ ಪರಿಚಯ ಆಗಿ ಸುಮಾರು **15** ವರ್ಷಗಳು ಆಗಿವೆ. ಆರೋಪಿಯ ಪರಿಚಯ ಆಗಿ ಸುಮಾರು **14** ವರ್ಷಗಳು ಆಗಿವೆ. ನನ್ನ ಸಂಬಂಧಿಕರಾದ ಚಂದ್ರು ಎನ್ನುವರು ಬಿ.ಎಸ್.ಎಫ್ ನಲ್ಲಿ ಕೆಲಸ ಮಾಡುತ್ತಾರೆ ಅವರ ಮುಖಾಂತರ ನನಗೆ ಸುಬ್ರಮಣ್ಯ ರವರ ಪರಿಚಯವಿದೆ.

ಡಿಸೆಂಬರ್ **2019** ರಲ್ಲಿ ಸುಬ್ರಮಣ್ಯ ಹಾಗೂ ಆರೋಪಿ ನನಗೆ ಮೊದಲಿಗೆ ಫೋನ್ ಮುಖಾಂತರ ಸಾಲ ಕೊಡಲು ಕೇಳಿದ್ದರು, ಈದಾದ ಒಂದು ವಾರದ ನಂತರ ನಾನು ಅವರಿಗೆ ಸಾಲ ಕೊಟ್ಟಿರುತ್ತೇನೆ. ನಾನು ಸುಬ್ರಮಣ್ಯ ಹಾಗೂ ಆರೋಪಿಯನ್ನು ಹೊಸಪೇಟೆಯ ಶಾನಭಾಗ್ ಹೊಟೇಲ್ ನಲ್ಲಿ ಅಗ ಭೇಟಿಯಾಗಿದ್ದೆ. ಆರೋಪಿಗೆ ಹಣದ ಅವಶ್ಯಕತೆ ಇದೆ ಎಂದು ಸದರಿ ಆರೋಪಿಯು ಸುಬ್ರಮಣ್ಯ ರವರ ಮುಖಾಂತರ ನನ್ನ ಬಳಿ ಸಾಲ ಕೇಳಿದ್ದರು. ಸಾಕ್ಷಿ ಮುಂದುವರೆದು ಮೊದಲಿಗೆ ಆರೋಪಿ ಸುಬ್ರಮಣ್ಯ ರವರ ಬಳಿ ಸಾಲ ಕೇಳಿದ್ದರು, ಅವರ ಬಳಿ ಅಷ್ಟು ಮೊತ್ತ ಇಲ್ಲ ಎಂದು ಸದರಿಯವರ ಮುಖಾಂತರ ಆರೋಪಿ ನನ್ನ ಬಳಿ ಸಾಲ ಕೇಳಿದ್ದರು ಎಂದು ನುಡಿಯುತ್ತಾರೆ. ಈ ಮೇಲೆ ಹೇಳಿದ ಶಾನಭಾಗ ಹೊಟೇಲ್ ಗೆ ಸುಬ್ರಮಣ್ಯ ಹಾಗೂ ಆರೋಪಿ ಇಬ್ಬರೂ ಬಂದಿದ್ದರು. ತುರ್ತು ಮನೆಯ ಖರ್ಚಿಗೆಂದು ಹಣ ಬೇಕಾಗಿದೆ ಎಂದು ಕೇಳಿದ್ದರು.

ನಾನು ಬಡ್ಡಿ ವ್ಯಾಪಾರ ಮಾಡುವುದಿಲ್ಲ. ನಾನು ಡಿಸೆಂಬರ್ 2019 ರಲ್ಲಿ ಶಾನಭಾಗ ಹೊಟೇಲ್ ನಲ್ಲಿ ಆರೋಪಿಗೆ ಸಾಲ ಕೊಟ್ಟಿರುತ್ತೇನೆ ಆದರೆ ದಿನಾಂಕ ನಿಖರವಾಗಿ ನೆನಪಿಲ್ಲ. ನಾನು ರೂ. 10 ಲಕ್ಷ ಸಾಲವನ್ನು ಆರೋಪಿಗೆ ನಗದು ರೂಪವಾಗಿ ಕೊಟ್ಟೆ. ಆ ದಿನ ನನ್ನ ಬಳಿ ರೂ. 10 ಲಕ್ಷ ಹಣ ಇತ್ತು. ನನ್ನ ಸಂಬಂಧಿಕರ ಭೂಮಿಗಳನ್ನು ಸಹ ನಾನೇ ಕೃಷಿ ಕೆಲಸ ಮಾಡಿಸುತ್ತೇನೆ. ಆದ್ದರಿಂದ ನೆಲ್ಲು ವ್ಯಾಪಾರದಿಂದ ಬಂದ ಲಾಭದ ಹಣವನ್ನು ನನ್ನ ಚಿಕ್ಕಪನವರು ನನ್ನ ಬಳಿ ಕೊಟ್ಟಿದ್ದರು ಆದ್ದರಿಂದ ಈ ಮೇಲೆ ಹೇಳಿದಷ್ಟು ನಗದು ಹಣ ನನ್ನ ಬಳಿ ಇತ್ತು. ಸಾಲ ಕೊಟ್ಟ ದಿನ ಆರೋಪಿ ಪ್ರಾಮಿಸರಿ ಪತ್ರವನ್ನು ಭದ್ರತೆಗಾಗಿ ಬರೆದುಕೊಂಡು ಬಂದು ನನ್ನ ಸಮಕ್ಷಮ ಸಹಿ ಮಾಡಿ ಕೊಟ್ಟರು. ಅದೇ ದಿನ ನಾನು ಆರೋಪಿಯಿಂದ ಚೆಕ್ ಪಡೆದಿದ್ದೆ ಎಂದರೆ ಸರಿಯಲ್ಲ. ಈ ಪ್ರಾಮಿಸರಿ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಪ್ರಾಮಿಸರಿ ಪತ್ರವನ್ನು ನ್ಯಾಯಾಲಯಕ್ಕೆ ಏಕೇ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿ 2022 ನೇ ಇಸವಿಯಲ್ಲಿ ಆರೋಪಿ ಮತ್ತು ಸುಬ್ರಮಣ್ಯ ರವರು ನನ್ನ ಬಳಿ ಇದ್ದ ಪ್ರಾಮಿಸರಿ ಪತ್ರವನ್ನು ವಾಪಸ್ಸು ಪಡೆದು ಚೆಕ್ ನ್ನು ಕೊಟ್ಟಿದ್ದರು ಎಂದು ನುಡಿಯುತ್ತಾರೆ.

ಡಿಸೆಂಬರ್ 2019 ರಲ್ಲಿ ಆರೋಪಿ ನನ್ನಿಂದ ಸಾಲ ಪಡೆದು ಮೂರು ತಿಂಗಳ ಒಳಗೆ ಅದರ ಮರು ಪಾವತಿ ಮಾಡುತ್ತೇನೆ ಎಂದು ಹೇಳಿದ್ದರು. 3 ತಿಂಗಳ ಆದ ನಂತರ ನಾನು ಆರೋಪಿಯನ್ನು ಸಾಲದ ಮರುಪಾವತಿ ಮಾಡಲು ಕೇಳಿದ್ದೆ ಆದರೆ ಅಗ ಕೋವಿಡ್ 19 ಸಾಂಕ್ರಾಮಿಕ ರೋಗ ಹರಡಿದ್ದರಿಂದ ಅವರು ನನ್ನ ಬಳಿ ಸಮಯಾವಕಾಶ ಕೇಳಿದ್ದರು ಹಾಗೂ ಇಲ್ಲಿಯವರೆಗೆ ಸಾಲದ ಮರು ಪಾವತಿ ಮಾಡಿಲ್ಲ.

ನಾನು ಇನ್‌ಕಮ್ ಟ್ಯಾಕ್ಸ್ ರಿಟರ್ನ್ಸ್ ಸಲ್ಲಿಸುತ್ತೇನೆ ಆದರೆ ತೆರಿಗೆ ಕಟ್ಟುವುದಿಲ್ಲ. ಸಾಕ್ಷಿ ಮುಂದುವರೆದು ಕೆಲವೊಮ್ಮೆ ಮಾತ್ರ ನಾನು ತೆರಿಗೆ ಪಾವತಿ ಮಾಡುತ್ತೇನೆ ಎಂದು ನುಡಿಯುತ್ತಾರೆ. 2019 ನೇ ಇಸವಿಯಲ್ಲಿ ನಾನು ಇನ್‌ಕಮ್ ಟ್ಯಾಕ್ಸ್ ರಿಟರ್ನ್ಸ್ ಫೈಲ್ ಮಾಡಿದ್ದರಲ್ಲಿ ಆರೋಪಿಗೆ ಸಾಲ ಕೊಟ್ಟ ಬಗ್ಗೆ ನಮೂದು ಮಾಡಿರುವುದು ನೆನಪಿಲ್ಲ. ಯಾವ ವರ್ಷಗಳಲ್ಲಿ ನಾನು ಆದಾಯ ತೆರಿಗೆ ಪಾವತಿ ಮಾಡಿರುತ್ತೇನೆ ಎಂದು ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಬಲ್ಲೆ. ಎಪ್ರೀಲ್ 2022 ರಲ್ಲಿ ನಾನು ಪ್ರಾಮಿಸರಿ ಪತ್ರವನ್ನು ಹಿಂದಿರುಗಿರುತ್ತೇನೆ. ಸದರಿ ಪ್ರಾಮಿಸರಿ ಪತ್ರವನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲವೇ ಎಂದರೆ ಸಾಕ್ಷಿ ನನ್ನ ಬಳಿ ಇದ್ದಿದ್ದರೆ ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಇನ್ನೂ ಹೆಚ್ಚಿನ ಪಾಟೀಸವಾಲಿಗಾಗಿ ಸಮಯಾವಕಾಶವನ್ನು ಕೇಳಿದ್ದು ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಅಪರ ಸಿವಿಲ್ ನ್ಯಾಯಾಲಯ
ಮತ್ತು ಪ್ರ. ದ. ನ್ಯಾ. ದಂ.ಗಳು, ಹೊಸಪೇಟೆ.